**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 437/2023 |
| ಸಿ.ಡಬ್ಲ್ಯೂ | 4 |
| ಪಿ.ಡಬ್ಲ್ಯೂ | 3 |

| | | |
|---|---|---|
| ಹೆಸರು | :- | ಪ್ರಭು ಬಡಿಗೇರ |
| ತಂದೆ/ಗಂಡನ ಹೆಸರು | :- | ಕಲ್ಲಪ್ಪ |
| ವಯಸ್ಸು | :- | 29 ವರ್ಷ |
| ಉದ್ಯೋಗ | :- | ಪಿ.ಸಿ ನಂ.589, ಮುಧೋಳ ಪೂಲೀಸ ಠಾಣೆ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ07.03.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

1. ನಾನು ಮೇ-2021 ರಿಂದ ಇಲ್ಲಿಯವರೆಗೆ ಮುಧೋಳ ಠಾಣೆಯಲ್ಲಿ ಪೊಲೀಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ01.04.2023 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಸಾ-1 ರವರು ಅವರಿಗೆ ಬಂದ ಮಾಹಿತಿ ಪ್ರಕಾರ ಮಂಟೂರ ಗ್ರಾಮದಲ್ಲಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಆ ಪ್ರಕಾರ ನಾನು ಚಾಸಾ-2 ಮತ್ತು ಚಾಸಾ-3 ರವರು ಕರೆದುಕೊಂಡು ಬಂದಿರುತ್ತೇನೆ. ಚಾಸಾ-1 ರವರು ಅವರಿಗೆ ಬಂದ ಮಾಹಿತಿ ವಿಷಯ ಪಂಚರಿಗೆ ತಿಳಿಸಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ಚಾಸಾ-1, ನಾನು ಮತ್ತು ಚಾಸಾ-5, ಪಂಚರು ಕೂಡಿಕೊಂಡು ಮಧ್ಯಾಹ್ನ 3-30 ಗಂಟೆಗೆ ಹೊರಟು ಮಂಟೂರ ಗ್ರಾಮಕ್ಕೆ 3-50 ಗಂಟೆಗೆ ತಲುಪಿದೆವು. ಅಲ್ಲಿ ಒಬ್ಬ ವ್ಯಕ್ತಿಯ ಸುತ್ತಮುತ್ತ ಸಾರ್ವಜನಿಕರು ನಿಂತಿದ್ದು, ಸಾರಾಯಿ ಪೌಚಗಳನ್ನು ನೀಡುವುದು ಮಾಡುತ್ತಿದ್ದನು. ಆತನ ಬಳಿ ರಟ್ಟಿನ ಡಬ್ಬಿ ಇತ್ತು. ಆತ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತಮಾಡಿಕೊಂಡು ಸಂಜೆ 4 ಗಂಟೆ ಸುಮಾರಿಗೆ ಆತನ ಬಳಿ ಹೋದಾಗ, ಅಲ್ಲಿ ಸಾರಾಯಿ ಖರೀದಿಸುತ್ತಿರುವವರು ನಮ್ಮನ್ನು ನೋಡಿ ಓಡಿ ಹೋದರು. ಆರೋಪಿತನನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ರಾಜು ತಂ.ಶಿವಪ್ಪ ತಳವಾರ ಸಾ-ಮಂಟೂರ ಎಂದು ತಿಳಿಸಿದನು. ಮದ್ಯ ಮಾರಾಟ ಮಾಡಲು ಪಾಸ್/ಪರಮಿಟ್ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದನು. 4-05 ಗಂಟೆ ಆತನನ್ನು ದಸ್ತಗೀರಿ ಪಡಿಸಿಕೊಂಡರು. ಆತನ ಬಳಿ ಇದ್ದ ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ ಬೆಂಗಳೂರು ವಿಸ್ಕಿ ಮಾದರಿಯ ತಲಾ 180 ಎಮ್.ಎಲ್ ಅಳತೆಯ 42 ಪೌಚಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ 42 ಪೌಚಗಳನ್ನು ವಶಪಡಿಸಿಕೊಂಡು ಅದೇ

ರಟ್ಟಿನ ಬಾಕ್ಸನಲ್ಲಿ ಹಾಕಿ ಬಿಳಿ ದಾರದಿಂದ ಕಟ್ಟಿ, ಇಲಾಖಾ ಸೀಲ್ ಹಾಕಿ ಚಾಸಾ-1 ರಿಂದ ಚಾಸಾ-3 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ಆರೋಪಿತನನ್ನು ಅಂಗ ಜಪ್ತಿ ಮಾಡಲಾಗಿ ರೂ.220/- ಗಳು ದೊರೆತವು. ಪಂಚನಾಮೆಯನ್ನು ಸಂಜೆ 4-05 ರಿಂದ 5-05 ರವರೆಗೆ ಪಂಚನಾಮೆಯನ್ನು ಚಾಸಾ-5 ರವರು ಬರೆದರು. ನಂತರ ಆರೋಪಿತನನ್ನು, ವಶಪಡಿಸಿಕೊಂಡ ಮುದ್ದೆ ಮಾಲು ಹಾಗೂ ಪಂಚನಾಮೆಯನ್ನು ಠಾಣೆಗೆ ತೆಗೆದುಕೊಂಡು ಬರಲು ಅವಶ್ಯವಿದ್ದ ಸಹಾಯ ಮಾಡಿರುತ್ತೇನೆ. ಸಾಕ್ಷಿಗೆ ಈಗ ಒಂದು ರಟ್ಟಿನ ಬಾಕ್ಸ ತೋರಿಸುತ್ತಿದ್ದು, ಅದನ್ನು ಅವರು ಗುರುತಿಸಿದ್ದರಿಂದ ಅದನ್ನು ಮುಮಾ-1 ಎಂದು ಗುರುತಿಸಲಾಯಿತು. ರೂ.220/- ಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಮುಮಾ-2 ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**<u>ಪಾಟೀ ಸವಾಲು : ಶ್ರೀ.ವಿ.ಆರ್.ಎಸ್ ವಕೀಲರಿಂದ ಆರೋಪಿ ಪರವಾಗಿ</u>**

1. ರೂ.220/- ರ ಮುಖಬೆಲೆ ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅದನ್ನು ಹೇಳಿಕೆಯಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಮಾಹಿತಿ ಚಾಸಾ-1 ರವರಿಗೆ ಬಂದಿಲ್ಲ, ಪಂಚರನ್ನು ಬರಮಾಡಿಕೊಳ್ಳಲು ನಿಮಗೆ ತಿಳಿಸಿಲ್ಲ, ನೀವು ಪಂಚರನ್ನು ಬರಮಾಡಿಕೊಂಡಿಲ್ಲ, ನೀವು ಘಟನೆಗೆ ಸಂಬಂಧಿಸಿದಂತೆ ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮದ್ಯವನ್ನು ಆರೋಪಿತ ಯಾವತ್ತು ಮಾರಾಟ ಮಾಡಿಲ್ಲ, ಯಾವುದೇ ಅಕ್ರಮ ಸಾರಾಯಿಯನ್ನು ಆತನಿಂದ ವಶಪಡಿಸಿಕೊಂಡಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚನಾಮೆಗೆ ಸ್ಥಳದಲ್ಲಿ ಚಾಸಾ-1 ಹಾಗೂ ಪಂಚರ ಸಹಿ ಪಡೆದಿಲ್ಲ, ಯಾವುದೇ ಹಣವನ್ನು ಆರೋಪಿತನಿಂದ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಹಾಗೂ ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಮೇಲಾಧಿಕಾರಿ ಆದ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 437/2023 |
| ಸಿ.ಡಬ್ಲ್ಯೂ | 5 |
| ಪಿ.ಡಬ್ಲ್ಯೂ | 4 |

| | | |
|---|---|---|
| ಹೆಸರು | :- | ಮಲಕಾರಿ ಒಡೆಯರ |
| ತಂದೆ/ಗಂಡನ ಹೆಸರು | :- | ಲಕ್ಷ್ಮಣ |
| ವಯಸ್ಸು | :- | 30 ವರ್ಷ |
| ಉದ್ಯೋಗ | :- | ಪಿ.ಸಿ ನಂ.1146, ಮುಧೋಳ ಪೊಲೀಸ ಠಾಣೆ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ07.03.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನಾನು ಕಳೆದ 5 ವರ್ಷಗಳಿಂದ ಮುಧೋಳ ಠಾಣೆಯಲ್ಲಿ ಪೊಲೀಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ01.04.2023 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಸಾ-1 ರವರು ಅವರಿಗೆ ಬಂದ ಮಾಹಿತಿ ಪ್ರಕಾರ ಮಂಟೂರ ಗ್ರಾಮದಲ್ಲಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿ ಚಾಸಾ-4 ರವರಿಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಆ ಪ್ರಕಾರ ಚಾಸಾ-4 ರವರು ಚಾಸಾ-2 ಮತ್ತು ಚಾಸಾ-3 ರವರು ಕರೆದುಕೊಂಡು ಬಂದಿದ್ದು. ಚಾಸಾ-1 ರವರು ಅವರಿಗೆ ಬಂದ ಮಾಹಿತಿ ವಿಷಯ ಪಂಚರಿಗೆ ತಿಳಿಸಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ಚಾಸಾ-1, ನಾನು ಮತ್ತು ಚಾಸಾ-4, ಪಂಚರು ಕೂಡಿಕೊಂಡು ಮಧ್ಯಾಹ್ನ 3-30 ಗಂಟೆಗೆ ಹೊರಟು ಮಂಟೂರ ಗ್ರಾಮಕ್ಕೆ 3-50 ಗಂಟೆಗೆ ತಲುಪಿದೆವು. ಅಲ್ಲಿ ಒಬ್ಬ ವ್ಯಕ್ತಿಯ ಸುತ್ತಮುತ್ತ ಸಾರ್ವಜನಿಕರು ನಿಂತಿದ್ದು, ಸಾರಾಯಿ ಪೌಚಗಳನ್ನು ನೀಡುವುದು ಮಾಡುತ್ತಿದ್ದನು. ಆತನ ಬಳಿ ರಟ್ಟಿನ ಡಬ್ಬಿ ಇತ್ತು. ಆತ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತಮಾಡಿಕೊಂಡು ಸಂಜೆ 4 ಗಂಟೆ ಸುಮಾರಿಗೆ ಆತನ ಬಳಿ ಹೋದಾಗ, ಅಲ್ಲಿ ಸಾರಾಯಿ ಖರೀದಿಸುತ್ತಿರುವವರು ನಮ್ಮನ್ನು ನೋಡಿ ಓಡಿ ಹೋದರು. ಆರೋಪಿತನನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ರಾಜು ತಂ.ಶಿವಪ್ಪ ತಳವಾರ ಸಾ-ಮಂಟೂರ ಎಂದು ತಿಳಿಸಿದನು. ಮದ್ಯ ಮಾರಾಟ ಮಾಡಲು ಪಾಸ್/ಪರಮಿಟ್ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದನು. 4-05 ಗಂಟೆ ಆತನನ್ನು ದಸ್ತಗೀರಿ ಪಡಿಸಿಕೊಂಡರು. ಆತನ ಬಳಿ ಇದ್ದ ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ ಬೆಂಗಳೂರು ವಿಸ್ಕಿ ಮಾದರಿಯ ತಲಾ 180 ಎಮ್.ಎಲ್ ಅಳತೆಯ 42 ಪೌಚಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ 42 ಪೌಚಗಳನ್ನು

ವಶಪಡಿಸಿಕೊಂಡು ಅದೇ ರಟ್ಟಿನ ಬಾಕ್ಸನಲ್ಲಿ ಹಾಕಿ ಬಿಳಿ ದಾರದಿಂದ ಕಟ್ಟಿ, ಇಲಾಖಾ ಸೀಲ್ ಹಾಕಿ ಚಾಸಾ-1 ರಿಂದ ಚಾಸಾ-3 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ಆರೋಪಿತನನ್ನು ಅಂಗ ಜಪ್ತಿ ಮಾಡಲಾಗಿ ರೂ.220/- ಗಳು ದೊರೆತವು. ಪಂಚನಾಮೆಯನ್ನು ಸಂಜೆ 4-05 ರಿಂದ 5-05 ರವರೆಗೆ ಪಂಚನಾಮೆಯನ್ನು ನಾನೇ ಸ್ಥಳದಲ್ಲಿ ಟೈಪ ಮಾಡಿರುತ್ತೇನೆ. ನಂತರ ಆರೋಪಿತನನ್ನು, ವಶಪಡಿಸಿಕೊಂಡ ಮುದ್ದೆ ಮಾಲು ಹಾಗೂ ಪಂಚನಾಮೆಯನ್ನು ಠಾಣೆಗೆ ತೆಗೆದುಕೊಂಡು ಬರಲು ಅವಶ್ಯವಿದ್ದ ಸಹಾಯ ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಮುಮಾ-1 ಮತ್ತು ಮುಮಾ-2 ತೋರಿಸುತ್ತಿದ್ದು ಅವುಗಳನ್ನು ಅವರು ಗುರುತಿಸುತ್ತಾರೆ. ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**ಪಾಟೀ ಸವಾಲು : ಶ್ರೀ.ವಿ.ಆರ್.ಎಸ್ ವಕೀಲರಿಂದ ಆರೋಪಿ ಪರವಾಗಿ**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಮಾಹಿತಿ ಚಾಸಾ-1 ರವರಿಗೆ ಬಂದಿಲ್ಲ, ಚಾಸಾ-1 ರವರು ಪಂಚರನ್ನು ಬರಮಾಡಿಕೊಂಡಿಲ್ಲ, ನೀವು ಘಟನೆಗೆ ಸಂಬಂಧಿಸಿದಂತೆ ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮದ್ಯವನ್ನು ಆರೋಪಿತ ಯಾವತ್ತು ಮಾರಾಟ ಮಾಡಿಲ್ಲ, ಯಾವುದೇ ಅಕ್ರಮ ಸಾರಾಯಿಯನ್ನು ಆತನಿಂದ ವಶಪಡಿಸಿಕೊಂಡಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚನಾಮೆಗೆ ಸ್ಥಳದಲ್ಲಿ ಚಾಸಾ-1 ಹಾಗೂ ಪಂಚರ ಸಹಿ ಪಡೆದಿಲ್ಲ, ಯಾವುದೇ ಹಣವನ್ನು ಆರೋಪಿತನಿಂದ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ನೀವು ಯಾವುದೇ ಪಂಚನಾಮೆಯನ್ನು ಬೆರಳಚ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಹಾಗೂ ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಮೇಲಾಧಿಕಾರಿ ಆದ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ